Notice of Adjournment Motion

re : Reply of the Minister for Municipal Administration about holding election to Hubli-Dharwar Corporation

SRI S.R. BOMMAI (Hubli).—I have given notice of the breach of privilege motion. The Minister for Municipal Administration is present in the House. I think my motion may betaken up. it is like this

"On June 1, 1978, the Hon. Minister for Municipal Administration stated in the House while replying to the Department on demand No. 30-Urban Development on 2nd May 1979, that he has instructed the Municipal Commissioner, Hubli-Dharwar Corporation to hold election. It is learnt that though the Municipal Commissioner has finanlised all the formalities and all steps to hold the election immediately have been completed and the election could be held within two months if the necessary notification and calendar of events is issued by the Government. Further, it is learnt that the Hon. Minister has issued instructions to the Commissioner again to increase the wards from 15 to 17 which will consume more time and will delay the holding of election. As a result of this, there is public agitation and hunger strike by the citizens of Hubli-Dharwar Corporation. The Hon. Minister has misled this House and he has suppressed the true facts. As such he has committed a breach of privilege of this House. I would like to rely on the statement made by the Minister".

ಸ್ವಾಮಿ, ನಾನು ಈ ಪ್ರಶ್ನೆಯನ್ನು ಈ ಮನೆಯಲ್ಲಿ ಪದೇ ಪದೇ ಎತ್ತಬೇಕಾಗಿದೆ. ಇದಕ್ಕೆ ಒಂದರಿ ಕೊನೆ ಇರಬೇಕು ಅನ್ನುವ ದೃಷ್ಟಿಯಿಂದ ನಾನು ಕೇಳುತ್ತೇನೆ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ ಬಗ್ಗೆ ವಾರ್ಡ್‌ಗಳನ್ನು ಹೆಚ್ಚು ಮಾಡಲು ಅಬ್ಜೆಕ್ಷನ್ ಕಾಲ್‌ಫಾರ್ ಮಾಡಿ ಎಷ್ಟೆಷ್ಟು ಸೀಟುಗಳು ಇರಬೇಕು ಅನ್ನುವುದನ್ನೂ ಕೂಡ ಗೊತ್ತು ಮಾಡಿ ಎಲ್ಲಿ ಕೆಲಸವನ್ನೂ ಮಾಡಿದ್ದರು. ಈ ಬಗ್ಗೆ ಚುನಾವಣೆಯನ್ನು ಆಗಲೇ ಮಾಡಬಹುದಾಗಿತ್ತು. ಆವಾಗ ತಾವು ಈ ಚುನಾವಣೆಯನ್ನು ಡಿಸೆಂಬರ್ ಒಳಗೆ ಮಾಡುತ್ತೇವೆಂದು ಈ ಮನೆಯಲ್ಲಿ ಆಶ್ವಾಸನೆ ಕೊಟ್ಟಿದ್ದೀರಿ. ಮತ್ತು ಇತ್ತೀಚೆಗೆ ಕೇಳಿದಾಗ ಅದರ ಚುನಾವಣೆಯನ್ನು ಇನ್ನು ಕೆಲವೇ ತಿಂಗಳಲ್ಲಿ ಮಾಡುತ್ತೇವೆಂದು ಹೇಳಿದಿರಿ. ಮತ್ತು ಹಿಂದೆ ಈ ಬಗ್ಗೆ ಕಮೀಷನರಿಗೆ ಆದೇಶ ಕೊಟ್ಟಿದ್ದೀರಿ ಎಂದು ನನಗೆ ತಿಳಿದು ಬಂದಿದೆ. ಈಗ ವಾರ್ಡ್‌ಗಳನ್ನು ಹೆಚ್ಚು ಮಾಡಿದ್ದೀರಿ. ಆದುದರಿಂದ ದಯವಿಟ್ಟು ಈ ಕಾರ್ಪೊರೇಷನ್ನಿನ ಚುನಾವಣೆ ಯಾವಾಗ ಮಾಡುತ್ತೀರಿ ಅನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಬೇಕು ಎಂದು ಕೇಳುತ್ತೇನೆ. ವಿತಕ್ಕೆಂದರೆ ಈಗಾಗಲೆ ಅಲ್ಲಿನ ನಾಗರೀಕರು ಅಲ್ಲಿ ಇದರ ಬಗ್ಗೆ ಉಪವಾಸ ಕೂತಿದ್ದಾರೆ ಆಪ್ಟೆ ಅಲ್ಲ ಮುಂದೆ ಹುಬ್ಬಳ್ಳಿ ಬಂದ್ ಮಾಡತಕ್ಕದ್ದು. ಇನ್ನು ಬೇರೆ ಬೇರೆ ವಿಚಾರಗಳನ್ನು ಅಲ್ಲಿನ ನಾಗರೀಕರು ಮಾಡಬೇಕೆಂದಿದ್ದಾರೆ. ಆದುದರಿಂದ ಈ ಚಳುವಳಿಯನ್ನು ದುಂಕ್ತಾಯ ಮಾಡತಕ್ಕಂಥಾದ್ದರ ಬಗ್ಗೆ ಸರ್ಕಾರ ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮತ್ತು ತಮಗೆ ಇನ್ನೊಂದು ವಿಷಯ ಏನೆಂದರೆ ಏನಾದರೂ ಕೇಳಿದರೆ ಈ ಮನೆಯಲ್ಲಿ ಒಂದು ಮಾತು ಹೇಳುತ್ತೀರಿ. ಹೊರಗಡೆ ಒಂದು ಮಾತು ಹೇಳುತ್ತೀರಿ ಮತ್ತು ಈ ಬಗ್ಗೆ ಅಧಿಕಾರಿಗೆ ಆದೇಶ ಕೊಡುತ್ತೇನೆ ಅಂತ ಹೇಳುತ್ತೀರಿ. ಈ ರೀತಿಯಾಗಿ ಬೇರೆ ಬೇರೆ ಮಾತು ಹೇಳಿ ಈ ಮನೆಯನ್ನು ತಪ್ಪುದಾರಿಗೆ ಎಳೆಯತಕ್ಕಂಥಾದ್ದು ಸರಿಯಲ್ಲ. ಸರ್ಕಾರ ಈ

ರೀತಿಯಾಗಿ ಇನ್ನು ಮುಂದುವರೆಯದೆ ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸುವುದು ಅತ್ಯಂತ ಅವಶ್ಯಕ ಎಂದು ಹೇಳುತ್ತೇನೆ. ಮತ್ತು ಸರ್ಕಾರದಿಂದ ಈ ಬಗ್ಗೆ ಸರಿಯಾದ ಉತ್ತರ ಬರದೇ ಹೋದರೆ ಇದನ್ನು ಬ್ರೀಚ್ ಆಫ್ ಪ್ರಿವಿಲೇಜ್ ಆಗಿ ಮಾಡುವುದಕ್ಕೆ ನಾವು ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ ಸರ್ಕಾರದಿಂದ ಸ್ಪಷ್ಟವಾದ ಉತ್ತರವನ್ನು ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಭಾವೂರಾವ್ ದೇಶಪಾಂಡೆ.—ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಮಾನ್ಯ ಮಂತ್ರಿಗಳು ೧೯೭೮ನೇ ಇಸವಿ ಡಿಸೆಂಬರ್ ಕೊನೇ ವೇಳೆಗೆ ಈ ಚುನಾವಣೆಗಳನ್ನು ನಡೆಸುತ್ತೇವೆ ಎಂದು ಆಶ್ವಾಸನೆ ಕೊಟ್ಟಿದ್ದರು. ತದನಂತರ ಮತ್ತೊಮ್ಮೆ ಈ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಒಂದು ಪತ್ರಿಕಾ ಹೇಳಿಕೆ ಕೊಟ್ಟು ಈ ಚುನಾವಣೆಯನ್ನು ಮೇ ಜೂನ್ ತಿಂಗಳಿನಲ್ಲಿ ನಡೆಸುತ್ತೇವೆಂದು ಹೇಳಿಕೆ ಕೊಟ್ಟರು. ಇದರ ಬಗ್ಗೆ ಏನಾಯಿತು?

ಇನ್ನು ಎರಡನೆಯದಾಗಿ ಕಾರ್ಪೊರೇಷನ್ ಕಮೀಷನರವರಿಂದ ಚುನಾವಣೆ ಬಗ್ಗೆ ಒಂದು ಡ್ರಾಫ್ಟ್ ಸೂಚನೆ ಬಂದಾಗ ಅದರಲ್ಲಿ ೧೫ ವಾರ್ಡ್‌ಗಳು ಮತ್ತು ೫೪ ಸೀಟುಗಳು ಅಂತ ಇದೆ. ಈ ರೀತಿಯಾಗಿ ನಾವು ಹಂಚಿದ್ದೇವೆ ಇದನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ ಎಂದು ತಿಳಿಸಿದರು. ಈಗ ನೋಡಿದರೆ ಅವರು ವಾರ್ಡ್ ಮಾಡಿರುವುದನ್ನು ನೋಡಿದರೆ ಅದು ಸರಿ ಆಗಿಲ್ಲಾ ಮತ್ತು ಈ ಚುನಾವಣೆ ಬಗ್ಗೆ ಕಮಿಷನರ್‌ಗೆ ಆದೇಶ ಕೊಟ್ಟಿದ್ದೇವೆ ಎಂದುಹೇಳ್ತೀರಿ

ಅಧ್ಯಕ್ಷರು.—ನಿಯಮಾವಳಿ ಪ್ರಕಾರ ಈ ನೋಟೀಸಿಗೆ ರುಜು ಹಾಕಿರುವವರು ಮಾತನಾಡಬೇಕು. ತಾವು ಇದರಲ್ಲಿ ರುಜು ಹಾಕದೇ ಇರುವುದರಿಂದ ಮಾತನಾಡುವುದಕ್ಕೆ ಅವಕಾಶ ಇಲ್ಲ. ತಾವು ಇದರಲ್ಲಿ ಭಾಗಿಯಾಗುವುದಕ್ಕೆ ಅವಕಾಶ ಇಲ್ಲಾ.

ಶ್ರೀ ಭಾವೂರಾವ್ ದೇಶಪಾಂಡೆ.—ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾದ್ದರಿಂದ ನಾನು ಒಂದೆರಡು ವಿಷಯಗಳನ್ನು ಮಾತ್ರ ಮಾತನಾಡುತ್ತೇನೆ. ಈಗ ತಾವು ಇದರ ಬಗ್ಗೆ ಕಮೀಷನರ್‌ರಿಗೆ ಆದೇಶ ಕೊಟ್ಟಿದ್ದೇವೆ. ಎಂದು ಹೇಳಿದಿರಿ. ಮೊದಲಿದ್ದ ಕಮೀಷನರ್ ಇಲ್ಲಾ. ಹೊಸಬರು ಕಮೀಷನರು ಆಲ್ಲಿಗೆ ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ. ಆಲ್ಲಿ ಈ ಪರಿಸ್ಥಿತಿ ಇರುವುದರಿಂದ ಆಲ್ಲಿಯ ನಾಗರೀಕರು ಜಳುವಳಿ ಮಾಡಿದ್ದಾರೆ. ಅನ್ನ ಸತ್ಯಾಗ್ರಹ ಮಾಡಿದ್ದಾರೆ. ಆಲ್ಲಿ ಈ ತರಹ ಒಂದು ಗಂಬೀರವಾದ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ಈ ಚುನಾವಣೆಯನ್ನು ಇನ್ನೂ ಮುಂದೂಡುವುದಾದರೆ ಇದರಲ್ಲಿ ಏನು ಲಾಭವಾಗುತ್ತದೆ ಮತ್ತು ಇದು ಯಾರಿಗೆ ಹಿತವಾಗುತ್ತದೆ. ವಿಧಾನಸೌಧದ ಹೊರಗೆ ಬಿನ್ನಬಿನ್ನವಾದ ಹೇಳಿಕೆಗಳನ್ನು ಕೊಡುವುದು ಏನು ಇದೆಯೋ ಅದರ ಬಗ್ಗೆ ವಿಚಾರ ಮಾಡುವುದಾದರೆ ಈ ಸೂಚನೆಯನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸುವುದು ಒಳ್ಳೆಯದು. ಮತ್ತು ಈ ಬಗ್ಗೆ ನಮ್ಮ ನಾಯಕರು ಎತ್ತಿದಂಥಾ ಒಂದು ಸೂಚನೆಗೆ ನಾನೂ ಸಹ ಬೆಂಬಲ ಕೊಡುತ್ತೇನೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಈ ಕಾರ್ಪೊರೇಷನ್ ಚುನಾವಣೆ ಬಗ್ಗೆ ಪ್ರಾಮುಖ್ಯವಾಗಿ ಹುಬ್ಬಳ್ಳಿ–ಧಾರವಾಡ ಚುನಾವಣೆ ಬಗ್ಗೆ ಪದೇ ಪದೇ ಈ ಮನೆಯಲ್ಲಿ ಎತ್ತುತ್ತಿದ್ದಾರೆ. ನಾನೂ ಕೂಡ ಅದಕ್ಕೆ ಪದೇ ಪದೇ ಉತ್ತರ ಕೊಡುತ್ತಾ ಇದ್ದೇನೆ. ಮತ್ತು ನಿರ್ದಿಷ್ಟವಾಗಿ ಈ ಒಂದು ಚುನಾವಣೆಯನ್ನು ಇನ್ನೂ ನಿಗದಿ ಮಾಡಿಲ್ಲಾ. ಮೊನ್ನೆ ದಿವಸ ನನ್ನ ಡಿಪ್ಯಾಂಡ್ ಬಂದಾಗ ನಾನು ಅದಕ್ಕೆ ಉತ್ತರ ಕೊಡತಕ್ಕಂಥಾ ಸಂದರ್ಭದಲ್ಲಿ ಇನ್ನು ಒಂದು ವರ್ಷ ದೊಳಗೆ ಎಲ್ಲಾ ಕಾರ್ಪೊರೇಷನ್ನಿನ ಚುನಾವಣೆಯನ್ನೂ ಸಹ ಮಾಡಿ ಮುಗಿಸುತ್ತೇವೆ ಎಂದು ತಿಳಿಸಿದ್ದೇನೆ. ಒಂದು ವರ್ಷದೊಳಗೆ ಎಂದರೆ ಅದು ೨ ತಿಂಗಳಾಗಬಹುದು, ೩ ತಿಂಗಳಾಗಬಹುದು, ಒಂದು ವರ್ಷಕ್ಕೆ ೧೨ ತಿಂಗಳು ಇರುವುದರಿಂದ ಅದರೊಳಗೆ ಯಾವ ತಿಂಗಳಾದರೂ ಆಗಬಹುದು. ಆದರೆ ಈವಾಗ ಹುಬ್ಬಳ್ಳಿ–ಕಾರ್ಪೊರೇಷನ್ನಿನ ಬಗ್ಗೆ ಹೇಳುವುದಾದರೆ ಅದನ್ನು ೧೭ ವಾರ್ಡ್‌ಗಳನ್ನಾಗಿ ವಿಂಗಡಣೆ ಏನು ಮಾಡಿದ್ದಾರೋ ಅದು ಬಂದಿದೆ. ಅವರು ಅದಕ್ಕೆ ಅಬ್ಜಕ್ಷನ್ ಕಾಲ್‌ಫಾರ್ ಮಾಡಿದ್ದರು. ಮೊದಲು ೧೫ ವಾರ್ಡ್‌ಗಳು ಏನು ಇದ್ದುವು ಅದಕ್ಕೆ ಇನ್ನೂ ೨–೩ ಜಾಸ್ತಿ ಮಾಡಬೇಕು ಎಂದು ಸಾರ್ವಜನಿಕರಿಂದಲೂ ಬಂದಿದೆ. ಅಲ್ಲದೆ ಅಧಿಕಾರಿಗಳಿಂದಲೂ ಕೂಡ ಇನ್ನೂ ೨–೩ ವಾರ್ಡ್‌ಗಳು ಜಾಸ್ತಿ ಮಾಡಬೇಕು ಎಂದು ತಿಳಿಸಿದ್ದಾರೆ. ಈ ದಿಶೆಯಲ್ಲಿ ಇರುವಾಗ ಆಲ್ಲಿ ವಾರ್ಡ್‌ಗಳನ್ನೂ ಇನ್ನೂ ಜಾಸ್ತಿ ಮಾಡಿಲ್ಲ. ಈಗ

ಇರತಕ್ಕಂಥಾ ವಾರ್ಡ್‌ಗಳನ್ನು ಹಾಗೆಯೇ ಇಟ್ಟುಕೊಂಡು ಮಾಡುವುದೇ ಅಥವಾ ಆ ವಾರ್ಡ್‌ಗಳನ್ನು ಜಾಸ್ತಿ ಮಾಡಬೇಕೇ ಎನ್ನುವ ಬಗ್ಗೆ ಇನ್ನೂ ಏನು ತೀರ್ಮಾನ ತೆಗೆದುಕೊಂಡಿಲ್ಲಾ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಆಲ್ಲಿ ನಾಗರೀಕರು ಈ ಚುನಾವಣೆ ಬಗ್ಗೆ ಉಪವಾಸ ಮಾಡುತ್ತಿದ್ದಾರೆ ಎಂದು. ಆದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದೆ ಈ ಮನೆಯಲ್ಲಿ ಚರ್ಚೆ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಸಹ ಈ ಚುನಾವಣೆಯನ್ನು ಆದಷ್ಟು ಜಾಗ್ರತೆ ಮಾಡುತ್ತೇವೆ ಎನ್ನುವ ಅಂಶವನ್ನು ಈಗಾಗಲೇ ತಿಳಿಸಿದ್ದಾರೆ. ಆದುದರಿಂದ ನಾನೂ ಕೂಡ ಈ ಸಂದರ್ಭದಲ್ಲಿ ಹೇಳುತ್ತೇನೆ ಏನೆಂದರೆ ಮುಂದೆ ಯಾವುದೇ ವಿಧಾನಸಭಾ ಅನುಕೂಲಗಳು ಇದ್ದರೂ ಸಹ ಈ ಕಾರ್ಪೊರೇಷನ್ನಿನ ಚುನಾವಣೆಯನ್ನು ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಮಾಡುತ್ತೇವೆ ಎಂದು ಹೇಳುತ್ತೇನೆ.

ಇದನ್ನು ನಾವು ಮುಂದೆ ಯಾವ ರೀತಿಯಿಂದಲೂ ಮುಂದುವರಿಸುವುದಿಲ್ಲ. ತಾವು ಸಹ ಅಲ್ಲಿ ಉಪವಾಸ ಮುಷ್ಕರ ಮಾಡತಕ್ಕಂಥ ನೌಕರರಿಗೆ ಇದನ್ನು ತಿಳಿಸಿ ಅವರು ತಮ್ಮ ಉಪವಾಸವನ್ನು ಅಂತ್ಯಗೊಳಿಸುವಂತೆ ಮಾಡಬೇಕು ಎಂದು ಹೇಳುತ್ತೇನೆ. ಯಾವರೀತಿಯಿಂದಲೂ ಚುನಾವಣೆಗಳನ್ನು ಮುಂದೂಡುವುದಿಲ್ಲ ಎನ್ನುವ ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ಹೋಸಪೇಟೆ ಡಿಸೆಂಬರ್ ೧೯೭೮ ರೊಳಗೆ ಹುಬ್ಬಳ್ಳಿ ನಗರಸಭೆಗೆ ಚುನಾವಣೆಗಳನ್ನು ಮಾಡುತ್ತೇವೆಂದು ಮಾತು ಕೊಟ್ಟಿದ್ದರು. ಆದೂ ಮುಂದೆ ಹೋಯಿತು ಈಗ ಮಾನ್ಯಮಂತ್ರಿಗಳು ಅಕ್ಟೋಬರ್ ಅಥವಾ ನವೆಂಬರ್ ತಿಂಗಳೊಳಗಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಚುನಾವಣೆಗಳನ್ನು ಮುಗಿಸಿ, ಚುನಾಯಿತ ಪ್ರತಿನಿಧಿಗಳ ಅಧಿಕಾರಕ್ಕೆ ಬರತಕ್ಕ ವ್ಯವಸ್ಥೆ ಮಾಡುತ್ತೇನೆಂದು ಮಾತು ಕೊಟ್ಟಿದ್ದಾರೆ. ಮಾನ್ಯಮಂತ್ರಿಗಳ ಈ ಮಾತನ್ನು ನಂಬಿ, ಉಪವಾಸ ಮಾಡತಕ್ಕ ನೌಕರರಿಗೆ ಈಮನೆಯ ಮೂಲಕ ತಮ್ಮ ಉಪವಾಸವನ್ನು ಬಿಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ. —ನಾನೇ ಸಂಬಂಧಪಟ್ಟ ಕಮಿಷನರ್ ಅವರನ್ನು ಕರೆಯಿಸಿ ಚುನಾವಣ ವೇಳಾ ಪಟ್ಟಿಯನ್ನು ನಿಗದಿಮಾಡಿ ಕಳುಹಿಸಿಕೊಡುತ್ತೇನೆ. ಚುನಾವಣೆಗಳನ್ನು ಮಾತ್ರ ಮುಂದೂಡುವುದಿಲ್ಲ.

MR. SPEAKER.—In the light of the state ment given by the Hon Minister for Municipal Administration, I treat this matter as closed.

BUDGET ESTIMATES FOR 1979-80 DEMANDS FOR GRANTS

Demand No. 1, 2, 3, and 33

SRI K.H. RANGANATH (Minister for Agriculture and Parliamentry Affairs)—Sir, on the recommendation of the Governor, I beg to move:

> "That a sum not exceeding Rs 19,56,79,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1980 in respect of Demand No. 1. "Agriculture (Excluding Horticulture and Drought Prone Areas Programme)"

> "That a sum not exceeding Rs. 1,31,08,000 inclusive of the sum granted 'on account' be granted to the Government to defray the charge which will comes in course of payment during the finacial year ending 31st day of March 1980 in rerpect of Demand No. 33 "State Legislatures".